ಮೈಸೂರ ಗೆಜೆಟ್ ಚಂದಾದಾರು ವಗೈರೆ.

ಮೈಸೂರ ಗೆಜೆಟ್ ಬಂಗಳೂರಲ್ಲಿ ಛಾಪಿಸಲ್ಪಡುತ್ತ್, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸು ಮುಂತಾದವುಗಳೂ ಬಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.	ಟಪ್ಪಾಲ್ ಹಾಸಲ್ ಮೈಸೂರು ಸೀವೆ ಶಿವಾಯಿ ಇತರ ಸ್ಥಳಗಳಿಗೆ.
	ರೂ. ಆ.	ರೂ. ಆ.
ಇಂಗ್ಲಿಷ್ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲಿಷ್ ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3. 8
ಚಷ್ ಮಾಹೇ ಯಾ ಕ್ವಾರ್ಟರಿಗೆ		ದಾಮುಷಾಯಿ ಪ್ರಕಾರ ದರಗಳು
		ರೂ. ಆ.
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ, ರೆಗ್ಯುಲೇರ್ಷ ಯಾ ಆಳ್ಟುಗಳು ಯಾವದೂ ಇಲ್ಲದಿದ್ದರೆ.		0 8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮರ್ಕುಂ 155ನೆ ನಂಬರ್ ಉಳ್ಳ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ತೀನೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿದಾರೆಂಬದಾಗಿ ಆಯಾ ತಾಲ್ಲೂಕು ಅಮಲ್‌ದಾರರಿಂದ ಬಂದು ಸರಟಿಫಿಕೇಟನ್ನ ಪಡೆದು ಹಾಜರ್ಮಾಡಬೇಕಾಗಿರುತ್ತ್.

1895ನೆ ಇಸವಿ ಜೂ 21ನೆ ಮರ್ಕುಂ 24205—6—ಜೆ. 6200ನೆ ನಂಬರ್ ಗವರ್ನಮೆಂಟ್ ಆರ್ಡರ್ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ್ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತ್.

1900ನೆ ಇಸವಿ ಆಗಸ್ಟ್ 21ನೆ ಮರ್ಕುಂ 2633—41 ಮಿಸ್. 558ನೆ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸ್ ಅನುಸರಿಸಿ, ಮೈಸೂರು ದಸರಾ ರೆಪ್ರಜೆಂಟೇಟಿವ್ ಮೆಂಬರುಗಳಾಗಿರುವ ಕಾಲದ ವರಿಗೆ ಮಾತ್ರ ಸದರಿ ಮೆಂಬರುಗಳವರಿಗೆ ಇಂಗ್ಲಿಷ್ ಅಥವಾ ಕನ್ನಡ ಗೆಜೆಟ್ ಅರ್ಧ ಛಾರ್ಜಿಗೆ ಕೊಡಲ್ಪಡುತ್ತೆ.

ಸಿವಿಲ್ ಕೋರ್ಟ್‌ಸಿಂದ ಕೊಡಲ್ಪಡುವ 1901ನೆ ಇಸವಿ VIIನೆ ರೆಗ್ಯುಲೇರ್ಷ ಅನುಸರಿಸಿ ಸರ್ಟಿಫಿಕೇಟ್

ಬಗ್ಯೆ ನೋಟಿಸುಗಳು :—	ರೂ.	ಆ.
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ ಇಂಗ್ಲೀಷು ಅಥವಾ ಕನ್ನಡ ..	2	8
ಎರಡನೇ ಸಲ ವ ಆತರುವಾಯ ಪ್ರತಿ ಅವರ್ತಿಗೂ ಡಿಟೋ ..	1	4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೆ ಸೆಕ್ಷನ್ ಅನುಸರಿಸಿ ದಿವಾಳಿ ಅಪ್ಲಿಕೇಷನ್‌ಗಳ ಬಗ್ಯೆ ನೋಟಿಸುಗಳಿಗೆ:—

ಮೊದಲನೇ ಸಲಕ್ಕೆ	5	0
ಎರಡನೇ ವ ಆತರುವಾಯ ಪ್ರತಿ ದಫಾಕ್ಕೆ	2	8

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೆ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.

ಡ್ಯೂಪ್ಲಿಕೇಟ್ ಕಾಪೀ ಪಟ್ಟೆ ವಗೈರೆ ಕೊಡುವ ಬಗ್ಯೆ ರೆವಿನ್ಯೂ ಆಫಿಸರಗಳು ಕೊಡುವ ನೋಟಿಸುಗಳಿಗೆ:—

ಮೊದಲನೇ ಸಲಕ್ಕೆ	ಪುಟ 1ಕ್ಕೆ	..	10 0
ಎರಡನೇ ಸಲ ವ ಆತರುವಾಯ ಪ್ರತಿ ಸಲಕ್ಕೂ	,,	..	5 0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಬ್ಲಿ 1ಕ್ಕೆ	..	0 8
ಎರಡನೇ ದಫಾ	ಡಿಟೋ	ಡಿಟೋ	0 6
ಮೂರನೇ ವ ಆತರುವಾಯ ಪ್ರತಿ ಸಲಕ್ಕೆ			0 4

ಪರಾ.—ಗೆಜೆಟ್ ಚಂದಾ ಮತ್ತು ಕೋರ್ಟುಗಳಿಂದ ಕಳುಹಿಸಲ್ಪಡುವ ಪ್ರಕಟಣೆಗಳ ಛಾರ್ಜು ಬಾಬತು ಬಾಬಲಗುಗಳನ್ನು ಸರ್ಕಾರಿ ಖಜಾನೆಗಳು ಜಮೆ ಹಿಡಿಯತಕ್ಕ ಬಗ್ಯೆ ಕಂಟ್ರೋಲರವರ ಅಪ್ಪಣೆ ಆಗಿರುತ್ತೆಯಾದ್ದರಿಂದ ಸದರಿ ಬಾಬಲಗುಗಳನ್ನು ಖಜಾನೆಗೇನೆ ಕಳುಹಿಸಿಕೊಟ್ಟು ಅಲ್ಲಿಂದ ಪಡೆದ ರಶೀತಿಯನ್ನು ಮಾತ್ರ ಆಫೀಸ್ ಮಜಕೂರಿಗೆ ದಾಖಲೆ ಬಗ್ಯೆ ರವಾನಿಸತಕ್ಕದ್ದು. ಮನಿ ಆರ್ಡರ್ ವಗೈರೆ ಕಳುಹಿಸಿಕೊಟ್ಟಲ್ಲಿ ಅಂಗೀಕರಿಸಲ್ಪಡುವದಿಲ್ಲಾ. ವಾಪಸ್ ಮಾಡಲ್ಪಡುತ್ತೆ.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರ್ ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರಟೆರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದುಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಐದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟ್‌ನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸು ವ ಇಸ್ತಿಹಾರ್‌ನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾನ್ಹ 12 ಘಂಟೆ ವಳಗಾಗಿ ಕಂಪೈಲರ್ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರಿ ಇಲ್ಲ.

ಡಿ. ಬಿ. ರಾಮಚಂದ್ರ ಮೊದಲಿಯಾರ್,
ಕಂಪೈಲರ್, ಮೈಸೂರು ಗೆಜೆಟ್.